# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ದಲಿತ ಅಧ್ಯಯನ ಪೀಠ

**ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿ ಮತ್ತು ಡಾ. ಬಾಬು ಜಗಜೀವನರಾಮ್ ಅವರ ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ**

**ಭಾರತದಲ್ಲಿ ಮೀಸಲಾತಿಯ ಚರಿತ್ರೆ– ವಿಶೇಷ ಉಪನ್ಯಾಸ ಕಾರ್ಯಕ್ರಮ–14.4.2023**

## ಸಮಸಮಾಜ ನಿರ್ಮಾಣಕ್ಕೆ ಜನರ ಮನಸ್ಥಿತಿ ಬದಲಾವಣೆ ಮುಖ್ಯ : ಡಾ. ಅರ್ಜುನ ಯ. ಪಂಗಣ್ಣನವರು

ಸಮಾಜದಲ್ಲಿ ಶತಮಾನಗಳಿಂದ ತುಳಿತ್ತೊಳಗಾದವರನ್ನು, ಶೋಷಿತರನ್ನು ಮುಖ್ಯವಾಹಿನಿಗೆ ತರವುದು ಸಂವಿಧಾನದ ಆಶಯವಾಗಿತ್ತು. ಅದನ್ನು ಮೀಸಲಾತಿಯನ್ನು ಜಾರಿಗೆ ತರುವ ಮೂಲಕ ಅವಕಾಶ ಮಾಡಿಕೊಟ್ಟಿತ್ತು. ಆದರೆ ಇಂದು ಮೀಸಲಾತಿ ಎಂಬುದು ರಾಜಕಾರಣದ ವೋಟ್‌ಬ್ಯಾಂಕ್ ಆಗಿದೆ. ಪ್ರಸ್ತುತ ಇದರ ಬಗ್ಗೆ ದೇಶದ ನಾಗರೀಕರು ಚಿಂತಿಸಬೇಕಾದ ಅಗತ್ಯವಿದೆ. ಸಮಸಮಾಜ ನಿರ್ಮಾಣವಾಗಲು ಜನರ ಸಾಮಾಜಿಕ ಮನಸ್ಥಿತಿ ಬದಲಾಗುವುದು ಮುಖ್ಯ ಎಂದು ವಿಶ್ರಾಂತ ಪ್ರಾಚಾರ್ಯರಾದ **ಡಾ. ಅರ್ಜುನ ಯ. ಪಂಗಣ್ಣನವರು** ಅಭಿಪ್ರಾಯ ಪಟ್ಟರು.



ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಮಾನ್ಯ ಕುಲಪತಿಯವರು ಹಾಗೂ ಗಣ್ಯರು ಪುಷ್ಪ ಅರ್ಪಿಸಿದರು

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ದಿನಾಂಕ 14.4.2023ರಂದು **ದಲಿತ ಅಧ್ಯಯನ ಪೀಠ** ವತಿಯಿಂದ ಆಯೋಜಿಸಿದ್ದ **ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿ ಮತ್ತು ಡಾ. ಬಾಬು ಜಗಜೀವನರಾಮ್ ಅವರ ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ**ವನ್ನು ಉದ್ದೇಶಿಸಿ ಅವರು ಮಾತನಾಡಿದರು. ಹಿಂದೆ ಏಕ ಮೀಸಲಾತಿ ಪದ್ಧತಿ ಜಾರಿಯಲ್ಲಿತ್ತು. ಆದರೆ ಇಂದು ಬಹು ಮೀಸಲಾತಿ ಪದ್ಧತಿ ಜಾರಿಯಲ್ಲಿದೆ. ದೇಶವನ್ನು ಜಾತಿ ಆಧಾರ ಮೇಲೆ ಕಟ್ಟುವುದು ತಪ್ಪು. ಹಿಂದೆ ನಮಗೆ ಯಾವ ವ್ಯವಸ್ಥೆ ಬೇಡವಾಗಿತ್ತೋ, ಇಂದು ಅದೇ ವ್ಯವಸ್ಥೆ ಹೊಸ ರೂಪದಲ್ಲಿ ಜನ್ಮ ತಾಳುತ್ತಿದೆ. ಮೂಲದಲ್ಲಿ ಯಾರಿಗೆ ಮೀಸಲಾತಿ ಸಿಗಬೇಕ್ಕಿತ್ತೋ, ಅವರಿಗೆ ಸಿಗುತ್ತಿಲ್ಲ. ಆರ್ಥಿಕತೆಯ ಆಧಾರದ ಮೇಲೆ ಮೀಸಲಾತಿಯನ್ನು ನೀಡುವಲ್ಲಿ ಸೂಕ್ತ ಮಾನದಂಡಗಳನ್ನು ಅಳವಡಿಸುವುದು ಮುಖ್ಯ. ಶೈಕ್ಷಣಿಕವಾಗಿ ಮೀಸಲಾತಿಯನ್ನು ನೀಡುವಾಗ ವಿದ್ಯಾರ್ಥಿಗಳ ಆದಾಯ ಮಿತಿ ಪರಿಗಣಿಸುವುದನ್ನು ಬಿಟ್ಟು, ರಾಜಕೀಯ ಅಭ್ಯರ್ಥಿಗಳಿಗೆ ಆದಾಯದ ಮಿತಿಯನ್ನು ವಿಧಿಸಬೇಕು. ಡಾ.ಬಿ.ಆರ್ ಅಂಬೇಡ್ಕರ್ ಅವರು ಪ್ರಪಂಚದ ಅನೇಕ ಗಣ್ಯ ವ್ಯಕ್ತಿಗಳಲ್ಲಿ ಅದ್ವಿತೀಯರು. ಇವರು ವ್ಯವಸ್ಥೆಯನ್ನು ಧಿಕ್ಕರಿಸಿ, ಬಂಡಾಯದ ಮೂಲಕ ದಲಿತರಿಗೆ ನ್ಯಾಯ ಕೊಡಿಸುವಲ್ಲಿ ಹೋರಾಡಿದರೆ, ಡಾ. ಬಾಬು ಜಗಜೀವನರಾಮ್‌ರವರು ವ್ಯವಸ್ಥೆಯೊಳಗಿದ್ದು, ದಲಿತರ ಪರವಾಗಿ ತಮ್ಮದೇ ನೆಲೆಯಲ್ಲಿ ಹೋರಾಟ ನಡೆಸಿದ ಮಹಾನ್

ಚೇತನಗಳು. ಇಂತಹ ಸಾಧಕರ, ಹೋರಾಟಗಾರ ತತ್ವಾದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.




ಡಾ. ಅರ್ಜುನ ಯ. ಪಂಗಣ್ಣನವರು ಕಾರ್ಯಕ್ರಮದ ವಿಶೇಷ ಉಪನ್ಯಾಸ ನೀಡಿದರು

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ **ಡಾ. ಡಿ.ವಿ. ಪರಮಶಿವಮೂರ್ತಿಯವರು** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಮೀಸಲಾತಿಯನ್ನು ಕುರಿತು ಚರ್ಚಿಸುವಾಗ ದಲಿತ ಪರ ಮತ್ತು ದಲಿತ ವಿರೋಧಿ ಎಂಬ ಸೂಕ್ಷ್ಮ ಮನಸ್ಥಿತಿ ಮುನ್ನೆಲೆಗೆ ಬರುವುದು. ಈ ಮನಸ್ಥಿತಿ ಬದಲಾಗಬೇಕಿದೆ. ಪ್ರಸ್ತುತ ದಿನಗಳಲ್ಲಿ ನಗರ ದಲಿತರು ಮತ್ತು ಗ್ರಾಮೀಣ ದಲಿತರು ಎಂಬ ಕಂದಕ ಉಂಟಾಗಿದೆ. ನಾವು ಇಂದು ಗ್ರಾಮೀಣ ದಲಿತರ ಸಂಕಷ್ಟಗಳ ನಿವಾರಣೆಗೆ ಹೆಚ್ಚು ಒತ್ತು ಕೊಡಬೇಕು. ಸಮಸಮಾಜ ನಿರ್ಮಾಣಕ್ಕೆ ಸ್ವತಂತ್ರ, ಸಮಾನತೆ ಮತ್ತು ಬ್ರಾತೃತ್ವ ಭಾವನೆಗಳು ಜನರಲ್ಲಿ ಮನೆಮಾಡಬೇಕಿದೆ ಎಂದು ಹೇಳಿದರು.





ಮಾನ್ಯ ಕುಲಪತಿಯವರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು

ಕಾರ್ಯಕ್ರಮದಲ್ಲಿ **ವಿವಿಧ ಪ್ರಶಸ್ತಿ ಪುರಸ್ಕೃತರಾದ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು.** ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಮಾನ್ಯ ಕುಲಸಚಿವರಾದ **ಡಾ. ಎ. ಸುಬ್ಬಣ್ಣ ರೈ ಅವರು** ಮಾತನಾಡಿದರು. ದಲಿತ ಅಧ್ಯಯನ ಪೀಠದ ಸಂಚಾಲಕರಾದ **ಡಾ. ವೆಂಕಟಗಿರಿ ದಳವಾಯಿ ಅವರು** ಪ್ರಾಸ್ತಾವಿಕವಾಗಿ ಮಾತನಾಡಿದರು. **ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಅಧ್ಯಾಪಕರು, ವಿದ್ಯಾರ್ಥಿಗಳು** ಉಪಸ್ಥಿರಿದ್ದರು. ಸಂಶೋಧನಾರ್ಥಿ ರವಿಚಂದ್ರ ನಿರೂಪಿಸಿದರು. ದೇವೇಂದ್ರಪ್ಪ ವಂದಿಸಿದರು.



ಮಾನ್ಯ ಕುಲಪತಿಯವರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಹಾಗೂ ವೇದಿಕೆಯ ಮೇಲಿನ ಗಣ್ಯರು ವಿವಿಧ ಪ್ರಶಸ್ತಿ ಪುರಸ್ಕೃತರಾದ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸನ್ಮಾನಿಸಿ, ಗೌರವಿಸಿದರು.



**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ದಲಿತ ಅಧ್ಯಯನ ಪೀಠ**

ವಿದ್ಯಾರಣ್ಯ - ೫೮೩ ೨೭೬

**ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಮತ್ತು ಡಾ. ಬಾಬು ಜಗಜೀವನರಾಮ್ ಅವರ ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ**

ಅಧ್ಯಕ್ಷತೆ
**ಡಾ. ಡಿ.ವಿ. ಪರಮಶಿವಮೂರ್ತಿ**
ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಶೇಷ ಉಪನ್ಯಾಸ :
**ಭಾರತದಲ್ಲಿ ಮೀಸಲಾತಿಯ ಚರಿತ್ರೆ**

ಉಪನ್ಯಾಸಕರು :
**ಡಾ. ಅರ್ಜುನ ಯ. ಪಂಗಣ್ಣನವರ**
ವಿಶ್ರಾಂತ ಪ್ರಾಚಾರ್ಯರು, ಚಿಂತಕರು
ಗೋಕಾಕ


ಸ್ವಾಗತ ಮತ್ತು ಪ್ರಾಸ್ತಾವಿಕ
**ಡಾ. ವೆಂಕಟಗಿರಿ ದಳವಾಯಿ**
ಸಂಚಾಲಕರು
ದಲಿತ ಅಧ್ಯಯನ ಪೀಠ

ದಿನಾಂಕ: ೧೪ ಏಪ್ರಿಲ್ ೨೦೨೩ ಬೆಳಗ್ಗೆ ೧೦:೩೦
ಸ್ಥಳ: ಮಂಟಪ ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸರ್ವರಿಗೂ ಆದರದ ಸ್ವಾಗತ

**ಡಾ. ವೆಂಕಟಗಿರಿ ದಳವಾಯಿ**
ಸಂಚಾಲಕರು
ದಲಿತ ಅಧ್ಯಯನ ಪೀಠ

**ಡಾ. ಎ. ಸುಬ್ಬಣ್ಣ ರೈ**
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ



**೨೦೨೨ - ೨೩ನೇ ಸಾಲಿನಲ್ಲಿ ವಿವಿಧ ಸಂಸ್ಥೆಯಿಂದ ಲಭಿಸಿದ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಕಾರ್ಯಕ್ರಮ**

**ಡಾ. ವಾಸುದೇವ ಬಡಿಗೇರ**
ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ದತ್ತಿ ಪ್ರಶಸ್ತಿ
ಕ.ಸಾ.ಪ., ಬೆಂಗಳೂರು.
ಆನೆಗುಂದಿ ಶ್ರೀ ಪ್ರಶಸ್ತಿ ಪತ್ರ - ಶ್ರೀಮದ್ ಜಗದ್ಗುರು ಆನೆಗುಂದಿ
ಮಹಾ ಸಂಸ್ಥಾನ ಸರಸ್ವತಿಪೀಠ ಪ್ರತಿಷ್ಠಾನ (ರಿ), ಕಟಪಾಡಿ
ಉಡುಪಿ ಜಿಲ್ಲೆ, ಕರ್ನಾಟಕ.

**ಡಾ. ಎ.ಎಸ್. ಪ್ರಭಾಕರ**
ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ
ಪುಸ್ತಕ ಬಹುಮಾನ ಪ್ರಶಸ್ತಿ, ಜಾನಪದ ಅಕಾಡೆಮಿ, ಬೆಂಗಳೂರು.

**ಡಾ. ತಾರಿಹಳ್ಳಿ ಹನುಮಂತಪ್ಪ**
ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ
ಕರ್ನಾಟಕ ಸದ್ಭಾವನ ಪ್ರಶಸ್ತಿ, ಕಲಾಬಂಧು ಫೌಂಡೇಷನ್ (ರಿ), ಬೆಂಗಳೂರು.

**ಡಾ. ಗೋವಿಂದ**
ಸಹಾಯಕ ಪ್ರಾಧ್ಯಾಪಕರು, ಸಂಗೀತ ಮತ್ತು ನೃತ್ಯ ವಿಭಾಗ
ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಪ್ರಶಸ್ತಿ, ಚೇತನ ಫೌಂಡೇಷನ್, ಕರ್ನಾಟಕ
ನ್ಯಾಷನಲ್ ಎಜುಕೇಶ್ ಡೇ ಅಬ್ದುಲ್ ಕಲಾಂ ಪ್ರಶಸ್ತಿ-ಬಾಲರಕ್ಷಕ
ಪ್ರತಿಷ್ಠಾನ ಮಹಾರಾಷ್ಟ್ರ.

**ಡಾ. ಎ. ವೆಂಕಟೇಶ**
ಉಪಕುಲಸಚಿವರು (ಆಡಳಿತ)
ಸಂತ ಗುರು ರವಿದಾಸ್ ರಾಷ್ಟ್ರೀಯ ಪ್ರಶಸ್ತಿ
ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ನವದೆಹಲಿ
ಸೇವಾರತ್ನ ರಾಷ್ಟ್ರೀಯ ಪ್ರಶಸ್ತಿ - ೨೦೨೨
ಬಹುಜನ ಸಾಹಿತ್ಯ ಆಕಾಡೆಮಿ, ಹೈದ್ರಾಬಾದ್.

**ಶ್ರೀ ಡಿ. ಹುಸೇನ್**
ತಾಂತ್ರಿಕ ಸಹಾಯಕರು
ಜಕಣಾಚಾರಿ ಪ್ರಶಸ್ತಿ - ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು.

**ಡಾ. ತಿಮ್ಮಣ್ಣ ಭೀಮರಾಯ**
ತಾತ್ಕಾಲಿಕ ಅಧ್ಯಾಪಕರು, ಸಂಗೀತ ಮತ್ತು ನೃತ್ಯ ವಿಭಾಗ
ಸ್ವರ ಸಾಮ್ರಾಟ ಪ್ರಶಸ್ತಿ - ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಕನ್ನಡ ಕಲಾ ಚೇತನ ಪ್ರಶಸ್ತಿ -
ಪ್ರಸಾರ ಭಾರತಿ ಸೌಹಾರ್ದ ಟ್ರಸ್ಟ್ (ರಿ). ಕಾರಟಗಿ, ಕೊಪ್ಪಳ.

ಭಾನುವಾರ, 16, ಏಪ್ರಿಲ್, 2023
ಹುಬ್ಬಳ್ಳಿ | HUBBALLI
ಸಂಯುಕ್ತ ಕರ್ನಾಟಕ

# ಸಮಸಮಾಜ ನಿರ್ಮಿಸಲು ಜನರ ಮನಸ್ಥಿತಿ ಬದಲಾಗಬೇಕಿದೆ



ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ದಲಿತ ಅಧ್ಯಯನ ಪೀಠ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರರ ಜಯಂತಿ ಮತ್ತು ಡಾ. ಬಾಬು ಜಗಜೀವನರಾಮ್ ಜಯಂತಿ ಆಚರಿಸಲಾಯಿತು.

**ಹೊಸಪೇಟೆ:** ಸಮಾಜದಲ್ಲಿ ಶೋಷಿತರನ್ನು ಮುಖ್ಯವಾಹಿನಿಗೆ ತರುವುದು ಸಂವಿಧಾನದ ಆಶಯವಾಗಿತ್ತು. ಅದನ್ನು ಮೀಸಲಾತಿ ಜಾರಿಗೆ ತರುವ ಮೂಲಕ ಅವಕಾಶ ಮಾಡಿಕೊಟ್ಟಿತ್ತು. ಆದರೆ ಇಂದು ಮೀಸಲಾತಿ ಎಂಬುದು ರಾಜಕಾರಣದ ವೋಟ್‌ಬ್ಯಾಂಕ್ ಆಗಿದೆ ಎಂದು ವಿಶ್ರಾಂತ ಪ್ರಾಚಾರ್ಯ ಡಾ.ಅರ್ಜುನ ಯ. ಪಂಗಣ್ಣನವರ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ದಲಿತ ಅಧ್ಯಯನ ಪೀಠ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ ಜಯಂತಿ ಮತ್ತು ಡಾ.ಬಾಬು ಜಗಜೀವನರಾಮ್ ಅವರ ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಹಿಂದೆ ಏಕ ಮೀಸಲಾತಿ ಪದ್ಧತಿ ಜಾರಿಯಲ್ಲಿತ್ತು. ಆದರೆ ಇಂದು ಬಹು ಮೀಸಲಾತಿ ಪದ್ಧತಿ ಜಾರಿಯಲ್ಲಿದೆ. ದೇಶವನ್ನು ಜಾತಿ ಆಧಾರದ ಮೇಲೆ ಕಟ್ಟುವುದು ತಪ್ಪು. ಹಿಂದೆ ನಮಗೆ ಯಾವ ವ್ಯವಸ್ಥೆ ಬೇಡವಾಗಿತ್ತೋ, ಇಂದು ಅದೇ ವ್ಯವಸ್ಥೆ ಹೊಸ ರೂಪದಲ್ಲಿ ಜನ್ಮ ತಾಳುತ್ತಿದೆ. ಮೂಲದಲ್ಲಿ ಯಾರಿಗೆ ಮೀಸಲಾತಿ ಸಿಗಬೇಕಿತ್ತೋ, ಅವರಿಗೆ ಸಿಗುತ್ತಿಲ್ಲ. ಆರ್ಥಿಕತೆಯ ಆಧಾರದ ಮೇಲೆ ಮೀಸಲಾತಿ ನೀಡುವಲ್ಲಿ ಸೂಕ್ತ ಮಾನದಂಡ ಅಳವಡಿಸುವುದು ಮುಖ್ಯ. ಶೈಕ್ಷಣಿಕವಾಗಿ ಮೀಸಲಾತಿ ನೀಡುವಾಗ ವಿದ್ಯಾರ್ಥಿಗಳ ಆದಾಯ ಮಿತಿ ಪರಿಗಣಿಸುವುದನ್ನು ಬಿಟ್ಟು, ರಾಜಕೀಯ ಅಭ್ಯರ್ಥಿಗಳಿಗೆ ಆದಾಯದ ಮಿತಿ ವಿಧಿಸಬೇಕು ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮೀಸಲಾತಿ ಕುರಿತು ಚರ್ಚಿಸುವಾಗ ದಲಿತ ಪರ ಮತ್ತು ದಲಿತ ವಿರೋಧಿ ಎಂಬ ಸೂಕ್ಷ್ಮ ಮನಸ್ಥಿತಿ ಮುನ್ನೆಲೆಗೆ ಬರುವುದು. ಈ ಮನಸ್ಥಿತಿ ಬದಲಾಗಬೇಕಿದೆ. ಪ್ರಸ್ತುತ ದಿನಗಳಲ್ಲಿ ನಗರ ದಲಿತರು ಮತ್ತು ಗ್ರಾಮೀಣ ದಲಿತರು ಎಂಬ ಕಂದಕ ಉಂಟಾಗಿದೆ. ನಾವು ಇಂದು ಗ್ರಾಮೀಣ ದಲಿತರ ಸಂಕಷ್ಟಗಳ ನಿವಾರಣೆಗೆ ಹೆಚ್ಚು ಒತ್ತು ಕೊಡಬೇಕು. ಸಮ ಸಮಾಜ ನಿರ್ಮಾಣಕ್ಕೆ ಸ್ವತಂತ್ರ, ಸಮಾನತೆ ಮತ್ತು ಬ್ರಾತೃತ್ವ ಭಾವನೆಗಳು ಜನರಲ್ಲಿ ಮನೆ ಮಾಡಬೇಕಿದೆ ಎಂದು ಹೇಳಿದರು.

ವಿವಿಧ ಪ್ರಶಸ್ತಿ ಪುರಸ್ಕೃತರಾದ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಕುಲಸಚಿವ ಡಾ.ಎ.ಸುಬ್ಬಣ್ಣ ರೈ ಮಾತನಾಡಿದರು. ದಲಿತ ಅಧ್ಯಯನ ಪೀಠದ ಸಂಚಾಲಕ ಡಾ.ವೆಂಕಟಗಿರಿ ದಳವಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಅಧ್ಯಾಪಕರು, ವಿದ್ಯಾರ್ಥಿಗಳು ಇದ್ದರು. ಸಂಶೋಧನಾರ್ಥಿ ರವಿಚಂದ್ರ ನಿರೂಪಿಸಿದರು. ದೇವೇಂದ್ರಪ್ಪ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » GANGAVATI
ಭಾನುವಾರ 16 ಏಪ್ರಿಲ್ 2023
16 APRIL 2023

### ಅವಳಿ ಜಿಲ್ಲೆಯ ವಿವಿಧೆಡೆ ಅಂಬೇಡ್ಕರ್, ಬಾಬುಜೀ ಜಯಂತ್ಯುತ್ಸವ

# ಮೀಸಲಾತಿ ವೋಟ್ ಬ್ಯಾಂಕ್ ಆಗದಿರಲಿ



ಹೊಸಪೇಟೆಯ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನರಾಮ್ ಭಾವಚಿತ್ರಕ್ಕೆ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ, ನಿವೃತ್ತ ಪ್ರಾಚಾರ್ಯ ಡಾ.ಅರ್ಜುನ ಯ.ಪಂಗಣ್ಣ, ಕುಲಸಚಿವ ಡಾ.ಎ.ಸುಬ್ಬಣ್ಣ ರೈ, ದಲಿತ ಅಧ್ಯಯನ ಪೀಠದ ಸಂಚಾಲಕ ಡಾ. ವೆಂಕಟಗಿರಿ ದಳವಾಯಿ ಪುಷ್ಪಾರ್ಪಣೆ ಮಾಡಿದರು.

■ ವಿಜಯವಾಣಿ ಸುದ್ದಿಜಾಲ ಹೊಸಪೇಟೆ

ಇತ್ತೀಚಿನ ದಿನಗಳಲ್ಲಿ ಮೀಸಲಾತಿ ಎಂಬುದು ರಾಜಕಾರಣದ ವೋಟ್‌ಬ್ಯಾಂಕ್ ಆಗಿ ಪರಿವರ್ತನೆಯಾಗಿದ್ದು, ಈ ಕುರಿತು ದೇಶದ ನಾಗರಿಕರು ಚಿಂತಿಸಬೇಕಿದೆ ಎಂದು ನಿವೃತ್ತ ಪ್ರಾಚಾರ್ಯ ಡಾ.ಅರ್ಜುನ ಯ. ಪಂಗಣ್ಣ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದಲ್ಲಿ ದಲಿತ ಅಧ್ಯಯನ ಪೀಠ ಶುಕ್ರವಾರ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಮ್ ಜಯಂತಿಯಲ್ಲಿ ಮಾತನಾಡಿ, ತುಳಿತ್ಕೊಳಗಾದವರು, ಶೋಷಿತರನ್ನು ಮುಖ್ಯವಾಹಿನಿಗೆ ತರವುದು ಸಂವಿಧಾನದ ಆಶಯವಾಗಿದ್ದು, ಮೀಸಲಾತಿ ಜಾರಿಗೆ ಮೂಲಕ ಅವಕಾಶ ಮಾಡಿಕೊಟ್ಟಿತ್ತು. ಆದರೆ, ಇಂದು ಮೀಸಲಾತಿ ರಾಜಕಾರಣದ ವೋಟ್‌ಬ್ಯಾಂಕ್ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹಿಂದೆ ಏಕ ಮೀಸಲಾತಿ ಪದ್ಧತಿ ಜಾರಿಯಲ್ಲಿತ್ತು. ಇಂದು ಬಹು ಮೀಸಲಾತಿ ಪದ್ಧತಿ ಜಾರಿಯಲ್ಲಿದೆ. ದೇಶವನ್ನು ಜಾತಿ ಆಧಾರದ ಮೇಲೆ ಕಟ್ಟುವುದು ತಪ್ಪು. ನಮಗೆ ಯಾವ ವ್ಯವಸ್ಥೆ ಬೇಡವಾಗಿತ್ತೋ, ಅದೇ ವ್ಯವಸ್ಥೆ ಹೊಸ ರೂಪದಲ್ಲಿ ಜನ್ಮ ತಾಳುತ್ತಿದೆ. ಮೂಲದಲ್ಲಿ ಯಾರಿಗೆ ಮೀಸಲಾತಿ ಸಿಗಬೇಕ್ಕಿತ್ತೋ, ಅವರಿಗೆ ಸಿಗುತ್ತಿಲ್ಲ ಎಂದು ದೂರಿದರು.

ಆರ್ಥಿಕತೆ ಆಧಾರದ ಮೇಲೆ ಮೀಸಲಾತಿ ನೀಡುವಲ್ಲಿ ಸೂಕ್ತ ಮಾನದಂಡಗಳನ್ನು ಅಳವಡಿಸುವುದು ಮುಖ್ಯ. ಶೈಕ್ಷಣಿಕವಾಗಿ "ಮೀಸಲಾತಿ ನೀಡುವಾಗ ವಿದ್ಯಾರ್ಥಿಗಳ ಆದಾಯ ಮಿತಿ ಪರಿಗಣಿಸುವುದನ್ನು ಬಿಟ್ಟು, ರಾಜಕೀಯ ಅಭ್ಯರ್ಥಿಗಳಿಗೆ ಆದಾಯದ ಮಿತಿ ವಿಧಿಸಬೇಕು ಎಂದರು. ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ವಿವಿಧ ವಿಭಾಗಗಳ ಪ್ರಾಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಯನ್ನು ಗೌರವಿಸಲಾಯಿತು.